**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 420/2025**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 2**

ಸಾಕ್ಷಿದಾರರ ಹೆಸರು : ಅಬ್ದುಲ್ ಅನಾನ

ತಂದೆಯ ಹೆಸರು : ಮೊಹಮದ್ ಜಾಫರ್ ಕಡದಾರಿ

ವಯಸ್ಸು : 35 ವರ್ಷ

ಉದ್ಯೋಗ : ಚಾಲಕ

ವಾಸ್ತವ್ಯ : ಮದಿನಾ ಕಾಲನಿ, ಮೊಹಿದ್ದೀನ್‌ಸ್ಟ್ರೀಟ್ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 02/12/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಈ ಕುರಿತು ನಾನು ಯಾವುದೇ ಹೇಳಿಕೆ ನೀಡಿದ್ದು ಇರುವುದಿಲ್ಲ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 09.06.2020 ರಂದು ರಾತ್ರಿ 10.45 ಗಂಟೆಗೆ ನಾನು ನನ್ನ ಮನೆಯ ಕಂಪೌಂಡಿನ ಒಳಗಡೆ ಮೀನು ತುಂಬುತ್ತಿರುವಾಗ 1 ನೇ ಆರೋಪಿತನು ಉಳಿದ ಆರೋಪಿತರೊಂದಿಗೆ ಬಂದು ನನಗೆ ಮನೆಯ ಹೊರಗಡೆ ಕರೆದು ಅವಾಚ್ಯವಾಗಿ ಬೈದು ಮೀನು ವ್ಯಾಪಾರ ಮಾಡುತ್ತೀಯಾ ಎಂದು ಕೈಯಿಂದ ಕೆನ್ನೆಗೆ ಹೊಡೆದಿದ್ದರು ಎಂದರೆ ಸರಿಯಲ್ಲ. ನಾನು ಬೊಬ್ಬೆ ಹಾಕಿದಾಗ ಚಾಸಾ 1 ಇವರು ಬಂದು ಹೊಡೆಯುವುದನ್ನು ಪ್ರಶ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಆರೋಪಿತರು ಚಾಸ 1 ರವರನ್ನು ಅವಾಚ್ಯವಾಗಿ ಬೈದಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿತನು ಕಲ್ಲಿನಿಂದ ನನ್ನ ತಲೆಗೆ ಹೊಡೆದಿದ್ದರು ಎಂದರೆ ಸರಿಯಲ್ಲ. ಘಟನೆಯ ಕಾಲಕ್ಕೆ ಚಾಸಾ 5 ರವರು ತಪ್ಪಿಸಲು ಬಂದಾಗ ಆರೋಪಿತರು ಅವರನ್ನು ಸಹ ನೆಲಕ್ಕೆ ಕೆಡವಿ ಕೈಯಿಂದ ಹೊಡೆದು ಕಾಲಿನಿಂದ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾವಿಬ್ಬರೂ ಕೂಗಿಕೊಂಡಾಗ ಕಾಲನಿಯ ಜನರು ಸೇರುವುದನ್ನು ಕಂಡು ಹೊಡೆಯುವುದನ್ನು ನಿಲ್ಲಿಸಿ ಇಂದು ನಿಮಗೆ ಬಿಟ್ಟಿರುತ್ತೇವೆ ನಮ್ಮ ಸುದ್ದಿಗೆ ಬಂದರೆ ನಿಮಗೆ ಒಂದು ಗತಿ

ಕಾಣಿಸುತ್ತೇವೆಂದು ಧಮ್ಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ನನಗೆ ನನ್ನ ಸಹೋದರರು ಚಿಕಿತ್ಸೆಗಾಗಿ ಬಟ್ಕಳ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಹೆಚ್ಚಿನ ಚಿಕಿಸ್ತೆಗಾಗಿ ವೈದ್ಯರು ಹೇಳಿದ್ದರೂ ಸಹ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ನನ್ನ ತಾಯಿ ಆರೋಪಿತರ ವಿರುದ್ಧ ದೂರು ನೀಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲಾ. ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ.,ಭಟ್ಕಳ.**